**ಓ.ಎಸ್.ನಂಃ 114/2015**

**ಡಿಡಬ್ಲ್ಯೂ-2**

**<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 15.06.2026 ರಂದು ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ಪ್ರತಿವಾದಿ ಪರ ವಕೀಲರಿಂದ</u>**

ನಾನು ಈ ದಿನ ನ್ಯಾಯಾಲಯದಲ್ಲಿ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಮಾಹಿತಿಯನ್ನು ನಾನೇ ವಕೀಲರಿಗೆ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ನನಗೆ ತಿಳಿದಿರುತ್ತವೆ ಸತ್ಯವಾಗಿರುತ್ತದೆ ಮತ್ತು ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

**<u>ಪಾಟೀ ಸವಾಲು: ವಾದಿ ಪರ ವಕೀಲರಿಂದಃ</u>**

ವಾದಿಯ ನಿವೇಶನ ಸಂಖ್ಯೆ ನನಗೆ ಗೊತ್ತು. ಸದರಿ ನಿವೇಶನದ ವಿಸ್ತೀರ್ಣ 40x50 ಇರಬಹುದು. ಪ್ರತಿವಾದಿಯ ನಿವೇಶನ ಸಂಖ್ಯೆಃ 05. ಸದರಿ ನಿವೇಶನ ವಿಸ್ತೀರ್ಣ 40x50 ಇರಬಹುದು. ಎರಡು ನಿವೇಶನಗಳ ಮಧ್ಯೆ ಪೂರ್ವ ಪಶ್ಚಿಮಾಭಿಮುಖವಾಗಿ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಯ ಅಗಲ 20 ಅಡಿ ಇರಬಹುದು. ಸದರಿ ರಸ್ತೆ ಪೂರ್ವ ಪಶ್ಚಿಮಾಭಿಮುಖವಾಗಿ ನೇರವಾಗಿ ಇದೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗೆ ಸುಮಾರು 50 ವರ್ಷಗಳ ಹಿಂದೆ ಅವರ ನಿವೇಶನಗಳು ಮಂಜೂರಾಗಿರಬಹುದು ಎಂದರೆ ಸರಿ. ಸದರಿ ನಿವೇಶನಗಳು ಮಂಜೂರು ಮಾಡುವ ಪೂರ್ವದಲ್ಲಿ ಬಡಾವಣೆ ನಕ್ಷೆಯನ್ನು ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಿವೇಶನ ಸಂಖ್ಯೆಃ 05 ರಲ್ಲಿ ಪ್ರತಿವಾದಿ ಮನೆ ನಿರ್ಮಿಸಿದ್ದಾರೆ. ನಿವೇಶನ ಸಂಖ್ಯೆಃ 05 ರ ಮುಂದಿರುವ ರಸ್ತೆಯನ್ನು ಪ್ರತಿವಾದಿ ಅತಿಕ್ರಮಿಸಿಕೊಂಡಿಲ್ಲ. ವಾದಿಯ ನಿವೇಶನ ಇಂದಿಗೂ ಖಾಲಿ ಇದೆ. ವಾದಿ ನಮ್ಮ ಗ್ರಾಮದವರು. ವಾದಿ ತಮ್ಮ ಮನೆ ಮುಂದೆ ಇರುವ ರಸ್ತೆಯನ್ನು ಅತೀಕ್ರಮಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ